ಓ ಎಸ್ ನಂ. 17/2021

ಡಿ ಡಬ್ಲ್ಯು 1

ದಿನಾಂಕ 22-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಎಸ್ ಸಿ ಎನ್ ವಕೀಲರಿಂದಃ</u>

ಮೃತ ಸಿದ್ದಪ್ಪ ರವರ ಮೊದಲನೇ ಹೆಂಡತಿ ಸುಭದ್ರಮ್ಮ ಮತ್ತು ಎರಡನೇ ಹೆಂಡತಿ ಕಾಳಮ್ಮ ಹಾಗೂ ಅವರ ಎಲ್ಲಾ ಮಕ್ಕಳು ಸದರಿ ಸಿದ್ದಪ್ಪರವರ ವಾರಸುದಾರರು ಎಂದರೆ ಸರಿ. ನಮ್ಮ ಕುಟುಂಬದ ಯಜಮಾನ ಸಿದ್ದಪ್ಪರವರಾಗಿದ್ದರು ಎಂದರೆ ಸರಿ. ಸಿದ್ದಪ್ಪರವರು ತಮ್ಮ ಜೀವಿತಾವಧಿಯಲ್ಲಿ ಸರ್ಕಾರಿ ನೌಕರರಾಗಿದ್ದರು ಎಂದರೆ ಸರಿ. ನನ್ನ ತಂದೆ ಸಿದ್ದಪ್ಪರವರು ಅವರ ಮೊದಲನೇ ಹೆಂಡತಿಯಾದ ಸುಭದ್ರಮ್ಮರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಸಿದ್ದಪ್ಪ ಮತ್ತು ಅವರ ವಾರಸುದಾರರ ನಡುವೆ ಯಾವುದಾದರೂ ಕಾನೂನಾತ್ಮಕ ರೀತಿಯಲ್ಲಿ ವಿಭಾಗವಾಗಿದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

ದಾವಾ ಐಟಂ ನಂ.1 ರ ಸರ್ವೆ ನಂ.206 ರ 1 ಎಕರೆ 3 ಗುಂಟೆ ಜಮೀನು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಸ್ವತ್ತು ನನ್ನ ಅಜ್ಜಿ ಅಂದರೆ ತಂದೆ ತಾಯಿ ರುದ್ರಮ್ಮರವರಿಗೆ ಅವರ ಗಂಡನ ಮುಖಾಂತರ ಪೌತಿ ವಾರಸುನೆಲೆಯಲ್ಲಿ ಬಂದಿರುತ್ತದೆ ಎಂದರೆ ಸರಿ. ದಾವಾ ಐಟಂ ನಂ.1 ರ ಸ್ವತ್ತಿನಲ್ಲಿ ವಾದಿಗಳಿಗೂ ಸಹ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಸದರಿ ದಾವಾ ಐಟಂ ನಂ.1 ಕ್ಕೆ ಸಂಬಂದಪಟ್ಟಂತೆ

ರುದ್ರಮ್ಮರವರಿಗೆ ಮೋಸ ಮಾಡಿ ನನ್ನ ತಾಯಿ ಕಾಳಮ್ಮರವರು ದಿನಾಂಕ 27/10/2014 ರಂದು ದಾನಪತ್ರ ಮಾಡಿಸಿಕೊಂಡಿರುತ್ತಾರೆ ಎಂಬುದಾಗಿ ಅದನ್ನು ರದ್ದತಿ ಕೋರಿ ನನ್ನ ಚಿಕ್ಕಪ್ಪನಾದ ಮಂಜುನಾಥರವರು ನನ್ನ ವಿರುದ್ಧ ಮತುತ ಕುಟುಂಬದ ಇತರ ಸದಸ್ಯರ ವಿರುದ್ಧ ಓ ಎಸ್ ನಂ.26/2016 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಮಂಜುನಾಥರವರ ಪರ ಡಿಕ್ರಿಯಾಗಿದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿ ನಾನು ಹೇಳಿದ್ದು, ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಮೇಲ್ಕಂಡ ಓ ಎಸ್ ನಂ.26/2016 ರ ಡಿಕ್ರಿಯ ಆದೇಶದಂತೆ ಪೈನಲ್ ಡಿಕ್ರಿ ಅರ್ಜಿಯನ್ನು ಸಹ ಮಂಜುನಾಥರವರ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಬಿ ಎ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಖಾಸಗಿ ಫಾರ್ಮಸಿಯ ಪರ್ಚೇಸ್ ಸೆಕ್ಷನಲ್ಲಿ 10 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ಮಾಸಿಕ 25 ಸಾವಿರ ರೂ ಸಂಬಳ ಪಡೆಯುತ್ತೇನೆ. ಸದರಿ ಆದಾಯವನ್ನು ಹೊರತು ಪಡಿಸಿ ನನಗೆ ಬೇರೆ ಯಾವುದೇ ಆದಾಯ ಇಲ್ಲ ಎಂದರೆ ಸಾಕ್ಷಿ ನನಗೆ ನನ್ನ ಶ್ರೀಮತಿ ಕಡೆಯಿಂದಲೂ ಸಹ ಆದಾಯ ಬರುತ್ತದೆ ಎಂದು ನುಡಿಯುತ್ತಾರೆ.

ನನ್ನ ಹೆಂಡತಿ ವೀರಮ್ಮರವರು ಟೈಲರಿಂಗ್ ಕೆಲಸ ಮಾಡುತ್ತಾರೆ. 2004 ರಲ್ಲಿ ನನ್ನ ವಿವಾಹವಾಗಿರುತ್ತದೆ. ನಾನು ಫಾರ್ಮಸಿಯಲ್ಲಿ ಕೆಲಸ ಮಾಡುವ ಪೂರ್ವದಲ್ಲಿ ಸುಮಾರು 10 ವರ್ಷಗಳ ಕಾಲ ಅಪೋಲೋ ಐ ಟಿ ಡಿಪಾರ್ಟಮೆಂಟ್ ನಲ್ಲಿ ಕೆಲಸ ಮಾಡಿರುತ್ತೇನೆ, ಅದೇ ಸಮಯದಲ್ಲಿ ನನ್ನ ಹೆಂಡತಿ ಸಹ ಗಾರ್ಮೆಂಟ್ಸ್ ಉದ್ಯೋಗಿಯಾಗಿದ್ದರು ಎಂದು ನುಡಿಯುತ್ತಾರೆ. ನನಗೆ ಮೇಲೆ ಹೇಳಿರುವಂತೆ ಆದಾಯ ಇರುವ ಬಾಬ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

2020 ರಲ್ಲಿ ನನ್ನ ತಂದೆ ಮರಣ ಹೊಂದಿದಾಗ ನಾನು ಅವರ ಜತೆಯಲ್ಲಿಯೇ ವಾಸಿಸುತ್ತಿದ್ದೆ ಎಂದರೆ ಸಾಕ್ಷಿ 2004 ರಲ್ಲಿ ನನ್ನ ವಿವಾಹವಾಗಿದ್ದು, ಆದಾದ ಒಂದು ವರ್ಷ ಮಾತ್ರ ನಾನು ನನ್ನ ತಂದೆ ಜತೆಯಿದ್ದು, ನಂತರ ಮನೆಯಿಂದ ಹೊರಗೆ ಹೋಗಿ ಬೇರೆ ವಾಸ್ತವ್ಯ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ಪ್ರತ್ಯೇಕ ವಾಸಿಸುತ್ತಿರುವುದನ್ನು ರುಜುವಾತು ಪಡಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸಾಕ್ಷಿಗೆ ದಿನಾಂಕ 12/12/2018 ರ ಕ್ರಯಪತ್ರದ ದೃಡೀಕೃತ ನಕಲಿನ ಪುಟ ಸಂಖ್ಯೆ 2 ರ ಹಿಂಬದಿಯಲ್ಲಿರುವ ಎರಡನೇ ಭಾವಚಿತ್ರವನ್ನು ತೋರಿಸಿ ಅದು ನನ್ನ ಭಾವಚಿತ್ರವಾಗಿರುತ್ತದೆ ಎಂದು ಕೇಳಲಾಗಿ ಸಾಕ್ಷಿ

ಹೌದು ಎಂದು ಒಪ್ಪಿರುತ್ತಾರೆ. ಸದರಿ ಕ್ರಯಪತ್ರವು ನಾನು, ನನ್ನ ತಂ◌ೆ ಮತ್ತು ತಾಯಿ ಎಲ್ಲಾರೂ ಸೇರಿ ಗಣೇಶಾಚಾರಿರವರಿಗೆ ದಾವಾ ಐಟಂ ನಂ.2 ರ ಸ್ವತ್ತನ್ನು ಮಾರಾಟ ಮಾಡಿರುವ ಕ್ರಯಪತ್ರವಾಗಿರುತ್ತದೆ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿರುತ್ತಾರೆ. ಆದ್ದರಿಂದ ಸದರಿ ಕ್ರಯಪತ್ರವನ್ನು ನಿಪಿ-**14** ಮತ್ತು ಸಾಕ್ಷಿಯ ಭಾವಚಿತ್ರವನ್ನು ನಿಪಿ-**14(ಎ)** ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.